ಅಮೂಲ್ಯ ವಸ್ತುವಿದೆ. ಅದನ್ನವರು ಕಾಪಾಡಲು ಗೋಡೆ ಕಟ್ಟಿರಬಹುದೆಂದು ಜನರು ಊಹಿಸುತ್ತಾರೆ.

ಗೋಡೆ ಕಟ್ಟಿ ಮುಚ್ಚಿಡುವುದರಿಂದ ಆಸೆಗಳು ಹುಟ್ಟಿಕೊಳ್ಳುತ್ತವೆ. ಇತರರ ಕಡೆ ಇದ್ದ ಅಮೂಲ್ಯ ವಸ್ತು ತನಗೂ ಬೇಕೆಂಬ ಮನುಷ್ಯ ಸಹಜ ಆಸೆ. ಕೋಟೆಗಳು ಗೋಡೆಯ ಉತ್ತಮ ಉದಾಹರಣೆ. ಕೋಟೆ ಕಟ್ಟಿ ಶತ್ರುಗಳನ್ನು ದೂರ ಇಡುವುದಲ್ಲದೆ ಶತ್ರುಗಳಿಗೆ ಆಹ್ವಾನವೂ ಕೊಟ್ಟಂತೆ. ಶತಮಾನಗಳಿಂದ ಇತಿಹಾಸದಲ್ಲಿ ಗೋಡೆ ಕಟ್ಟುವುದು, ಅದನ್ನು ಮುತ್ತಿಗೆ ಹಾಕುವುದು ಮತ್ತು ಅದನ್ನು ಕೆಡುವುದರ ನಿದರ್ಶನಗಳಿವೆ. ಟ್ರಾಯ್ ದೇಶ ಹೆಲನ್ ಎಂಬ ಸುಂದರ ಸ್ತ್ರೀಯನ್ನು ಕದ್ದು ಅದರ ಎತ್ತರ ಗೋಡೆಗಳ ಹಿಂದೆ ಮುಚ್ಚಿಟ್ಟರು. ಅವಳಿಗಾಗಿ ಯುದ್ಧ ನಡೆಯಿತು. ಗೋಡೆ ಭೇದಿಸಲಾಗದೆ ಕಪಟದಿಂದ ಒಳಹೊಕ್ಕು ಅವಳನ್ನು ಮರಳಿ ಪಡೆದರು ಅವಳ ಜನ.

ಕೆಲವೊಮ್ಮೆ ಗೋಡೆಗಳು ಭವ್ಯವಾದ ವಾಸ್ತುಶಿಲ್ಪದ ಉದಾಹರಣೆ ಆಗಿವೆ. ಚೀನಾದ ಗೋಡೆ ಹೊರಗಿನ ದಾಳಿಕೋರರಿಂದ ಅಷ್ಟು ಭದ್ರತೆ ಒದಗಿಸದಿದ್ದರೂ ಅದೊಂದು ಉತ್ತಮ ತಾಂತ್ರಿಕ ಸಾಧನೆ ಆಗಿದೆ. ಕಲ್ಲು, ಮಣ್ಣು, ಇಟ್ಟಿಗೆಗಳಿಂದ ಕಟ್ಟಿದ ಈ ಗೋಡೆ ಅಂತರಿಕ್ಷದಿಂದಲೂ ಕಾಣಿಸುತ್ತದೆ. ಅದನ್ನು ಕಟ್ಟಿದ ಉದ್ದೇಶವೂ ಅಷ್ಟು ಸ್ಪಷ್ಟವಾಗಿಲ್ಲ.

ಗೋಡೆ ಕಟ್ಟುವ ಉದ್ದೇಶ ಏನೇ ಇದ್ದರೂ ಅವುಗಳ ಮೂಲಭೂತ ಉದ್ದೇಶ ಜನರನ್ನು ವಿಭಾಗಿಸುವುದು, ಜನರ, ಅವರ ವಿಚಾರಗಳ ಮುಕ್ತ ವಿನಿಮಯ ತಡೆಯುವುದು. ಅವರ ವೈವಿಧ್ಯತೆಗೆ ಒಂದು ಕಾನೂನು ಬದ್ಧ ಹೆಸರು ಕೊಡುವುದು. ಪೂರ್ವ ಜರ್ಮನಿ ಹಾಗೂ ಪಶ್ಚಿಮ ಜರ್ಮನಿಯ ನಡುವೆ ಗೋಡೆ ಎದ್ದಾಗ, ಪೂರ್ವ ಜರ್ಮನಿಯ ಸರಕಾರಕ್ಕೆ ತಮ್ಮ ಜನರೆಲ್ಲಿ ಹೊರಟು ಹೋಗುವರೆಂಬ ಚಿಂತೆಯಿಂದ ಗೋಡೆ ಕಟ್ಟಿದರು. ಅವರನ್ನು ತಮ್ಮ ಕಡೆ ತಡೆ ಹಿಡಿದು ತಮ್ಮ ತತ್ವದ ಸಾಚೆಯಲ್ಲಿ ಜನರನ್ನು ಹಾಕ ಬಯಸಿದರು. ಆದರೆ ಅದರಿಂದ ಜನರಿಗೆ ಜೀವನದಲ್ಲಿ ಒಂದು ಉದ್ದೇಶ ಸಿಕ್ಕಿತು. ಗೋಡೆಯ ಆಚೆ ಕಡೆ ಹೋಗಬೇಕೆಂಬ ಹಂಬಲ. ಅದಕ್ಕಾಗಿ ಪರದಾಡಿದರು. ಕೆಲವರು ತಮ್ಮ ಜೀವನವನ್ನೂ ತೆತ್ತರು. ಎರಡೂ ದೇಶದ ಜನರ ಸಂಸ್ಕೃತಿಯಲ್ಲಿ ಭಿನ್ನತೆ ಇರಲಿಲ್ಲ. ಆದರೆ ಸರಕಾರದ ಭಿನ್ನ ವಿಚಾರದಿಂದ ಗೋಡೆ ಎದ್ದಿತು. ಮುಂದೆ ಅದನ್ನು ಕೆಡವಲಾಯಿತು.

ಮೆಕ್ಸಿಕೋ ಮತ್ತು ಅಮೆರಿಕದ ನಡುವಿನ ಗೋಡೆ ದಟ್ಟ ದಾರಿದ್ರ್ಯ ಮತ್ತು ಭವ್ಯ ಶ್ರೀಮಂತಿಕೆಯನ್ನು ವಿಭಾಗಿಸುತ್ತದೆ. ಕೆಲವು ಗೋಡೆಗಳು ಧರ್ಮಗಳನ್ನು, ಕೆಲವು ಗೋಡೆಗಳು ಭಾಷೆಗಳನ್ನು ವಿಭಾಗಿಸುತ್ತವೆ. ಒಂದೇ ಇದ್ದ ರಾಷ್ಟ್ರಗಳು ಎರಡು ಹೋಳಾಗಿ ಗೋಡೆ ಕಟ್ಟಿಕೊಳ್ಳುತ್ತವೆ. ಶ್ರೀಮಂತ ದೇಶಗಳು ಗೋಡೆ ಕಟ್ಟಿ ಬಡವರು ಬರದಂತೆ ನಿರ್ಬಂಧಿಸುತ್ತಾರೆ. ತಮ್ಮ ಸಂಪನ್ಮೂಲ ಕರಗದಂತೆ ನೋಡಿಕೊಳ್ಳಲು.

ಕೆಲವು ಮಾನಸಿಕ ಗೋಡೆಗಳನ್ನು ಮನುಷ್ಯ ತನ್ನ ತಲೆಯಲ್ಲಿ ಕಟ್ಟಿಕೊಳ್ಳುತ್ತಾನೆ. ಭೌತಿಕ ಗೋಡೆಗಳು ಸುರಕ್ಷತೆ ಅಲ್ಲ ಅದರ ಭಾವನೆ ಕೂಡುತ್ತವೆ ಅಷ್ಟೆ. ಹೊರಗಿನ ವೈರಿಗಳಿಗಿಂತ ಮನಸ್ಸಿನ ಭಯ, ಆತಂಕಗಳಿಗೆ ಗೋಡೆ ಬೇಕು. ಕಣ್ಣಿಗೆ ಕಾಣುವ ಗೋಡೆಗಳಿಂದ ಮನಸ್ಸಿಗೆ ನೆಮ್ಮದಿ. ಬಯಲಿನಲ್ಲಿ ಒಂದು ಥರದ ಗದ್ದಲ, ಗೊಂದಲ, ಗೋಡೆ ಇದ್ದಲ್ಲಿ ಎಲ್ಲದಕ್ಕೂ ನಿಖರವಾದ ಅಸ್ತಿತ್ವ. ಒಂದು ರೀತಿಯ ಶಿಸ್ತು.

ಜಾಗತೀಕರಣವಾದ ಮೇಲೆ ಗಣಕ ಯಂತ್ರದಲ್ಲಿ ತಮ್ಮ ತಮ್ಮ ಡೇಟಾ ಕಾಪಾಡಲು ಫಾಯರ್ ವಾಲ್‌ಗಳ ಆವಿಷ್ಕಾರವಾಯಿತು. ಅದು ಒಂದು ಮಾದರಿಯ ಗೋಡೆಯೆ, ಬೆಂಕಿಯ ಗೋಡೆ ಎಂದು ಅನುವಾದವಾಗುವುದು ಯಾರ ಮೇಲೆ ವಿಶ್ವಾಸವಿಲ್ಲವೋ ಅವರನ್ನು ಫಾಯರ್ ವಾಲ್‌ನ ಆಚೆ ಇಡುವುದು ಅದರ ಕೆಲಸ. ಜಾಗತೀಕರಣ ಹಾಗೂ ಮುಕ್ತ ಮಾರುಕಟ್ಟೆ ಬಯಲು ಸೃಷ್ಟಿಸಿದರೂ ಫಾಯರ್‌ವಾಲ್ ಗೋಡೆ ಕಟ್ಟಿದೆ.

ಗೋಡೆಗಳಿಲ್ಲದಿದ್ದರೆ ಜೀವನ ನೀರಸವಾಗುತ್ತಿತ್ತು. ಗೋಡೆಗಳು ಪ್ರಚೋದನಕಾರಿ. ಮನುಷ್ಯ ಯಾವಾಗಲೂ ಪ್ರಚೋದನೆಗೆ ಪ್ರತಿಕ್ರಿಯಿಸುತ್ತಾನೆ. ಗೋಡೆ ಕಟ್ಟಲು ಒಂದು ಉದ್ದೇಶ, ಬೀಳಿಸಲು ಇನ್ನೊಂದು ಉದ್ದೇಶ. ಗೋಡೆ ಕಟ್ಟುವುದು ಬೀಳಿಸುವುದು ಎರಡೂ ಐತಿಹಾಸಿಕ ಪ್ರಸಂಗಗಳು. ಗೋಡೆಗಳಿಗೆ ಮಾತಾಡಲು ಬರುತ್ತಿದ್ದರೆ ಎಷ್ಟು ಕತೆಗಳನ್ನು ಅವು ಹೇಳುತ್ತಿದ್ದವೋ, ಬರೀ ಬಯಲಿದ್ದರೆ ಅದಕ್ಕೆ ನನ್ನದೆಂಬ ಮಾಲೀಕತ್ವ ಇರುವುದಿಲ್ಲ. ಅದು ಪಾಳು ಬಿದ್ದು ಹೋಗಬಹುದು. ಕೌರವರು ಪಾಂಡವರು ಬೇಲಿ ಗೋಡೆ ಕಟ್ಟದ ಕಾರಣ ಬಯಲಿನಲ್ಲಿ ಮಹಾಭಾರತವಾಯಿತು. ಉತ್ತಮ ಗೋಡೆ ಕಟ್ಟುವವರು ಇದ್ದಷ್ಟು, ಬೀಳಿಸುವ ಶೂರ ವೀರರು ಹುಟ್ಟಿಕೊಳ್ಳುವರು. ಪ್ರಚೋದನೆಗೆ ಸ್ಪಂದಿಸಿ ಪ್ರತಿಕ್ರಿಯಿಸುವ ಜನರಿಂದ ಆಗುವ ಕಾರ್ಯಕ್ಕೆ ಬಹುಶಃ ಪ್ರಗತಿ ಎನ್ನುವರು.

